# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೩<br>**Part – III** | ಬೆಂಗಳೂರು, ಶುಕ್ರವಾರ, ೨೫, ಜುಲೈ, ೨೦೨೫( **ಶ್ರಾವಣ** ,೦೩, ಶಕವರ್ಷ, ೧೯೪೭)<br>**BENGALURU, FRIDAY, 25, JULY, 2025 ( SHRAVANA , 03, SHAKAVARSHA, 1947)** | ನಂ. ೪೧೬<br>**No. 416** |
|---|---|---|


**ಕರ್ನಾಟಕ ಸರ್ಕಾರ**

**ಕಡತ ಸಂಖ್ಯೆ:ನಅಇ 100 ಎಂಎಲ್ಆರ್ 2023(e)**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ:25/07/2025.**

**ಅಧಿಸೂಚನೆ**

ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಸೆಕ್ಷನ್–3 ರೊಂದಿಗೆ ಓದಿಕೊಂಡಂತೆ ಸೆಕ್ಷನ್–9 & 361 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಘನತೆವೆತ್ತ ಕರ್ನಾಟಕ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ ಅಂದರೆ:

1. ಅಂಥ ಪ್ರದೇಶದ ಜನಸಂಖ್ಯೆ ಐವತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋ ಮೀಟರ್ ಪ್ರದೇಶಕ್ಕೆ ಒಂದು ಸಾವಿರದ ಐದು ನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;
3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂಥ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಿಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ರೂಪಾಯಿಗಳು ಅಥವಾ ವಾರ್ಷಿಕ ತಲಾ ಒಬ್ಬನಿಗೆ ನಲವತ್ತೈದು ರೂಪಾಯಿಗಳ ದರದಂತೆ ಲೆಕ್ಕ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆಯಿರದ ಹೊರತು:
4. ಅಂಥ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು.

ಶೆಡ್ಯೂಲ್–ಬಿ ಯಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಶೆಡ್ಯೂಲ್–ಎ ರಲ್ಲಿನ ವಿಜಯನಗರ ಜಿಲ್ಲೆಯ "ಹರಪನಹಳ್ಳಿ ಪುರಸಭೆ ಪ್ರದೇಶ" ವನ್ನು ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ದೃಷ್ಟಿಯಿಂದ "ಸಣ್ಣ ನಗರ ಪ್ರದೇಶ" ಎಂದು ಉದ್ಘೋಷಿಸಿ, ಸದರಿ ಸಣ್ಣ ನಗರ ಪ್ರದೇಶವನ್ನು "ಹರಪನಹಳ್ಳಿ ನಗರಸಭೆ" ಎಂದು ಸಹ ಪದನಾಮೀಕರಿಸಲು ಹಾಗೂ ಸದರಿ ಸಣ್ಣ ನಗರ ಪ್ರದೇಶಕ್ಕೆ "ನಗರಸಭೆ"ಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಈ ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಈ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಲು ಇಚ್ಛಿಸುವ ಎಲ್ಲಾ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣಸಹಿತವಾಗಿ ಸದರಿ

ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮಹಡಿ, ವಿ.ವಿ.ಗೋಪುರ, ಬೆಂಗಳೂರು ಇವರಿಗೆ ಸಲ್ಲಿಸಬೇಕೆಂದು ಹಾಗೂ ಅಧಿಸೂಚನೆಯನ್ನು ಸದರಿ ಅವಧಿಯ ತರುವಾಯ ನಿಗದಿತ ಸಮಯದಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

**ಸಂಖ್ಯೆ:ನಅಇ 100 ಎಂಎಲ್‌ಆರ್ 2023(e).**

**ಶೆಡ್ಯೂಲ್–ಎ**

| ಜಿಲ್ಲೆ | ಮೇಲ್ದರ್ಜೆಗೇರಿಸಲಾಗುವ ಸ್ಥಳೀಯ ಸಂಸ್ಥೆ ಹೆಸರು | ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಪ್ರದೇಶಗಳ ವಿವರ | ಒಟ್ಟು ಪ್ರದೇಶ |
|---|---|---|---|
| ವಿಜಯನಗರ | ಹರಪನಹಳ್ಳಿ ಪುರಸಭೆ | ಹಾಲಿ ಹರಪನಹಳ್ಳಿ ಪುರಸಭೆ ವ್ಯಾಪ್ತಿಯ ಪ್ರದೇಶಗಳು | 25.36 ಚದರ ಕಿಲೋ ಮೀಟರ್ |

**ಷೆಡ್ಯೂಲ್–ಬಿ**

**ಪೂರ್ವ:** ದಕ್ಷಿಣ ಪೂರ್ವ ದಿಕ್ಕುಗಳು ಕೂಡುವ ಮೂಲೆಯಿಂದ (ಆಸ್ಟ್ರೇಯ ದಿಕ್ಕು) ಪ್ರಾರಂಭಗೊಂಡು ಉತ್ತರದ ಕಡೆಗೆ ಹರಪನಹಳ್ಳಿ ಪಟ್ಟಣ ಗಡಿಯ ಮೂಲಕ ಗಡಿ ರೇಖೆಯ ಮೂಲಕ ಸರ್ವೇ ನಂ.260, 259, 258, 257, 255, 253 ಮೂಲಕ ಹರಪನಹಳ್ಳಿ ಕೂಡ್ಲಿಗಿ ರಸ್ತೆ ದಾಟಿ ಸರ್ವೆ ನಂ. 247, 245, 234, 233 ಗಳನ್ನು ಶಿಸಿ, ಇನ್ನೊಂದು ರಸ್ತೆ ಅಂದರೆ ಹರಪನಹಳ್ಳಿ ಹಾಗೂ ಸರ್ವೆ ನಂ. 233ನ್ನು ಪ್ರವೇಶಿಸಿ, ಒಳಗೊಂಡ ರಸ್ತೆ, ಹರಪನಹಳ್ಳಿ ನಿಚ್ಚಾಪುರ ಗುಡಿಗುಂಟ ಹಾದು ಆನಂತರ ಗಡಿಯ ಪಶ್ಚಿಮ ದಿಕ್ಕಿನ ಎಲ್ಲೆಯ ಮೂಲಕ ಹಾದು ಸರ್ವೆ ನಂ. 231, 230, 218, 217, 216, 213, 211, 210, 185, 184, 182, 181, 180, 178, 69, 68 ಇವುಗಳನ್ನು ಹಾಯ್ದು ತದನಂತರ ಹರಪನಹಳ್ಳಿ ಶೃಂಗಾರತೋಟ ರಸ್ತೆ ಅಂದರೆ ಸರ್ವೆ ನಂ.71 ರಿಂದ 50. 67, 66, 64, 61, 60, 59, 58, 56, 55, 53 ರಿಂದ ಮುಂದೆ ಸರ್ವೆ ನಂ.66, 67, 64, 61, 60, 59, 56, 58, 55, 53 ಹರಪನಹಳ್ಳಿ ಗ್ರಾಮದ ಸರಹದ್ದು ಮುಖಾಂತರ ಗುಡ್ಡ ಪ್ರದೇಶ ಮತ್ತು ಕಾಯಕದಲ್ಲಿ ಇನಾಂ ಭೂಮಿಯವರೆಗೆ ಹರಪನಹಳ್ಳಿ ಪುರಸಭೆಯ ಸರಹದ್ದು ಆಗಿರುತ್ತದೆ.

**ಪಶ್ಚಿಮ:** ಕರೇಕಲ್ಲು ಗುಡ್ಡ ಎನ್ನುವ ಸರ್ವೆ ನಂ.1 ವಾಯುವ್ಯ ದಿಕ್ಕಿನ ಮೂಲೆಯಿಂದ ಪ್ರಾರಂಭವಾಗಿ ಕೆಳಗಡೆ ಸರ್ವೆ ನಂ.5, 6, 7 ನೈಋತ್ಯ ದಿಕ್ಕಿನ ಮೂಲೆಗೆ ನೈಋತ್ಯ ದಿಕ್ಕಿನ ಮೂಲೆಗೆ ಮುಂದುವರೆದು, ಸರ್ವೆ ನಂ. 4, 5, 6, 7, 89, 91, 110, 113, 114, 121, 122. 123ರ ಮೂಲಕ ಹಾದು ಸರ್ವೆ ನಂ. 124ವುಳ್ಳ ಹರಪನಹಳ್ಳಿ ಹಡಗಲಿ ರಸ್ತೆಯನ್ನು ದಾಟಿ, ಸರ್ವೆ ನಂ.125,128,133,134,136ರ ಮೂಲಕ ಮುಂದುವರೆದು, ಸರ್ವೆ ನಂ. 137ರಲ್ಲಿ ಹರಪನಹಳ್ಳಿ ಹುಲಿಕಟ್ಟೆ ರಸ್ತೆಯನ್ನು ದಾಟಿದ ನಂತರ ಇದು ಕೆಳಗಡೆ ಸರ್ವೆ ನಂ. 138, 139, 570, 571, 572, 573, 574, 575, 584, 585, 587, 590, 591, 592, 617, 618, 619, 620, 621, 623, 624, 625 ಗಳ ಮೂಲಕ ಮುಂದುವರೆದು ಹರಪನಹಳ್ಳಿ ಅನಂತರ ಹರಪನಹಳ್ಳಿ ರಸ್ತೆಯನ್ನು ದಾಟಿ ಅಲ್ಲಿಂದ ಸರ್ವೆ 610, 690, 607, 608, 605, 604, 531, 495, 494, 493 ಇವುಗಳ ಮೂಲಕ ಸಾಗಿ ಸರ್ವೆ ನಂ. 472ರ ಬಂಡಿ ಜಾಡನ್ನು ದಾಟಿ ಹರಪನಹಳ್ಳಿ ಸರ್ವೆ ನಂ. 626, 474, 651, 629, 630, 632, 633, 689, 646, 647 ಮತ್ತು 490 ರ ಮೂಲಕ ಮಾದಾಪುರ, ನಾಣ್ಯಾಪುರ ಮತ್ತು ಗುಡ್ಡ ಪ್ರದೇಶದ ನೈಋತ್ಯ ಮೂಲೆಯನ್ನು ತಲುಪುವವರೆಗೆ ಇರುವ ಗಡಿಯು ಹರಪನಹಳ್ಳಿ ಪುರಸಭೆಯ ಸರಹದ್ದು ಆಗಿರುತ್ತದೆ.

**ಉತ್ತರ:** ಈಶಾನ್ಯ ಮೂಲೆಯಿಂದ ಪ್ರಾರಂಭವಾಗಿ ಸರ್ವೆ ನಂ. 58 ವಾಯುವ್ಯ ಗಡಿ ಮೂಲಕ ಮುಂದುವರೆದು, ಸರ್ವೆ ನಂ. 52, 51, 50, 48, 31, 30, 25, 24, 23, 22, 21ರ ಮೂಲಕ ಹಾದು ಸರ್ವೆ ನಂ. 17ರ ಹರಪನಹಳ್ಳಿ ಹೊಸಪೇಟೆ ರಸ್ತೆಯನ್ನು ದಾಟಿ ಸರ್ವೆ ನಂ. 15ನ್ನು ಪ್ರವೇಶಿಸಿ, ಸರ್ವೆ ನಂ. 1ರ ವಾಯುವ್ಯ ಮೂಲೆಯನ್ನು ಸೇರುವುದು. ಇವೆಲ್ಲಾ ಸರ್ವೆ ನಂ.ಗಳು ಹರಪನಹಳ್ಳಿ ಗ್ರಾಮದವುಗಳಾಗಿದ್ದು, ಕಾಯಕದಲ್ಲಿ ಮತ್ತು ಶೃಂಗಾರತೋಟ ಗ್ರಾಮ ಮತ್ತು ಬಾಗಳಿ ಗ್ರಾಮದ ಮುಖಾಂತರ ಇನಾಂ ಗ್ರಾಮಗಳವರೆಗೆ. ಇದು ಹರಪನಹಳ್ಳಿ ಪುರಸಭೆಯ ಉತ್ತರ ದಿಕ್ಕಿಗಿರುವ ಸರಹದ್ದು ಆಗಿರುತ್ತದೆ.

**ದಕ್ಷಿಣ:** ಸರ್ವೆ ನಂ. 490ರ ನೈಋತ್ಯ ದಿಕ್ಕಿನ ಮೂಲೆಯಿಂದ ಪ್ರಾರಂಭವಾಗಿ ಆಗ್ನೆಯ ದಿಕ್ಕಿನ ಮೂಲೆವರೆಗೆ ಮುಂದುವರೆದು, ಸರ್ವೆ ನಂ. 648, 489ರ ಮೂಲಕ ಹಾದು, ಸಣ್ಣ ಹಳ್ಳವನ್ನು ದಾಟಿದ ನಂತರ ಸರ್ವೆ ನಂ. 642ನ್ನು ಪ್ರವೇಶಿಸಿ ಸರ್ವೆ ನಂ. 643, 644, 450, 449, 447, 446, 445, 441, 440 ರ ಮೂಲಕ ಮುಂದುವರೆದು ಸರ್ವೆ ನಂ. 437ರ ಇನ್ನೊಂದು ಹಳ್ಳವನ್ನು ದಾಟಿ ಸರ್ವೆ ನಂ. 436ನ್ನು ಪ್ರವೇಶಿಸಿ. ನಂತರ ಸರ್ವೆ ನಂ. 437ರ ಹರಪನಹಳ್ಳಿ ಕ್ಯಾರಕಟ್ಟಿ ರಸ್ತೆಯಿಂದ ಸರ್ವೆ ನಂ. 436ನ್ನು ಪ್ರವೇಶಿಸಿ, ಬಂಡಿ ಜಾಡಿನ ಮೂಲಕ ಉತ್ತರಾಭಿಮುಖವಾಗಿ ಸರ್ವೆ ನಂ. 410, 388, 397, 395, 394ರ ಮೂಲಕ ಸರ್ವೆ ನಂ. 393ರ ಮಂಜೂರಾಯನ ಕಟ್ಟೆಯನ್ನು ದಾಟಿ ಸರ್ವೆ ನಂ. 392. 391ನ್ನು ಹಾದು. ಬಂಡಿ ಜಾಡನ್ನು ದಾಟಿದ ನಂತರ ಸರ್ವೆ ನಂ. 300ರ ದೇವರ ತಿಮಲಾಪುರ ರಸ್ತೆಯನ್ನು ದಾಟಿ ನಂತರ ಸರ್ವೆ ನಂ. 352, 351ನ್ನು ಪ್ರವೇಶಿಸುವುದು ನಂತರ ಸರ್ವೆ ನಂ. 439ನ್ನು ಪ್ರವೇಶಿಸಿ, ಸರ್ವೆ ನಂ. 340, 339, 337, 336, 334, 333, 385, 384 ರ ಪೂರ್ವ ದಿಕ್ಕಿನ ಸರಹದ್ದಿನ ರೇಖೆಯ ಮೂಲಕ ಮುಂದುವರೆದು ಸರ್ವೆ ನಂ. 283, 282, 262ರ ಹರಪನಹಳ್ಳಿ ಅಡವಿಹಳ್ಳಿ ರಸ್ತೆಯ ಮೂಲಕ ಸರ್ವೆ ನಂ. 260 ರ ಆಗ್ನೇಯ ಮೂಲೆಯನ್ನು ತಲುಪುವುದು. ಇವೆಲ್ಲಾ ಹರಪನಹಳ್ಳಿ ಗ್ರಾಮದ ಸರ್ವೆ ನಂ. ಗಳಾಗಿ ಹಾದು ಇದು ಗುಡ್ಡ ಪ್ರದೇಶ ಮತ್ತು ಅಡವಿಗಳ್ಳಿ ಗಡಿಯವರೆಗೆ ಇರುತ್ತದೆ. ಇದು ದಕ್ಷಿಣ ದಿಕ್ಕಿನ ಹರಪನಹಳ್ಳಿ ಪುರಸಭೆಯ ಸರಹದ್ದು ಆಗಿರುತ್ತದೆ.

## GOVERNMENT OF KARNATAKA

**No.UDD 100 MLR 2023(e).**

Karanataka Government Secretariat,
Vikasa Soudha,
Bengaluru, **dated 25/07/2025.**

## NOTIFICATION

In exercise of the powers conferred by the Section-3 read with Section-9 and 361 of the Karnataka Municipalities Act, 1964, the Town Municipal Area of Harapanahalli of Vijayanagar District is proposed to be notified as the "Smaller Urban Area" as mentioned in Schedule "A" along with the boundaries mentioned in Schedule "B" and further to declare as the "City Municipal Council of Harapanahalli" and constitute the City Municipal Council to the said smaller urban area with effect from the date of publishing this Notification in the Official Gazette by His Excellency, the Governor of Karnataka for the purpose of administration having regard to:

i. The population of such area is not less than fifty thousand;
ii. The density of population in such area is not less than one thousand five hundred inhabitants to one square kilo meter of area;
iii. The revenue generated for local administration from such area from tax and non-tax sources in the year of the last preceding census is not less than rupees nine lakhs per annum or a sum calculated at the rate of rupees forty-five per capita per annum, whichever is higher;
iv. The percentage of employment in non-agricultural activities is not less than fifty per cent of the total employment.

The Notification is hereby published for the information of the Public. All the persons, who would like to file any objection/suggestion to this Notification are hereby required to submit the same with reasons in writing to the Director, Directorate of Municipal Administration, 9th Floor, V.V.Tower, Bengaluru within 30 days from publication of this Notification in the Official Gazette. Further, Notification will be taken up for final consideration after the mentioned period of 30 days.

By Order and in the name of the
Governor of Karnataka,

**(T Manjunath)**
Under Secretary to Government,
Urban Development Department

**No.UDD 100 MLR 2023(e)**

**Schedule-A**

| District | Name of the ULB being upgraded | Areas to be included | Total Area |
|---|---|---|---|
| Vijayanayagar | Harapanahalli Town Municipal Council | Areas of Existing Harapanahalli Town Municipal Council | 25.36 Square Kilo Meters |

**SCHEDULE-B**

**East:** Starting from the southeastern corner where the southeast directions meet (Agneya direction), the boundary extends northward along the limits of Harapanahalli town, passing through survey numbers 260, 259, 258, 257, 255, and 253, crossing the Harapanahalli-Kudligi road. It continues through survey numbers 247, 245, 234, and 233, then intersects another road including Harapanahalli and survey number 233. From there, it passes through the Harapanahalli-Nichapur-Gudigunta route and follows the western boundary, crossing survey numbers 231, 230, 218, 217, 216, 213, 211, 210, 185, 184, 182, 181, 180, 178, 69, and 68. The boundary then follows the Harapanahalli-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



Shrungaratota road, starting from survey number 71, and continues through 67, 66, 64, 61, 60, 59, 58, 56, 55, and 53. Further, it extends through 66, 67, 64, 61, 60, 59, 56, 58, 55, and 53, marking the town's boundary through Harapanahalli village limits, hill areas, and Inam lands.

**West:** Starting from the northwestern corner at **Karekallu Hill (Survey No. 1)**, the boundary extends downward to **Survey Nos. 5, 6, and 7,** reaching the southwestern corner. It continues through survey numbers **4, 5, 6, 7, 89, 91, 110, 113, 114, 121, 122, and 123,** crossing **Harapanahalli-Hadagali road at Survey No. 124.** It then extends through survey numbers **125, 128, 133, 134, and 136,** crossing the **Harapanahalli-Hulikatte road at Survey No. 137**. Further, it moves downward through **Survey Nos. 138, 139, 570, 571, 572, 573, 574, 575, 584, 585, 587, 590, 591, 592, 617, 618, 619, 620, 621, 623, 624, and 625**, then crosses **Harapanahalli road.** From there, it follows **Survey Nos. 610, 690, 607, 608, 605, 604, 531, 495, 494, and 493,** crossing **the cart track at Survey No. 472**. The boundary continues through **Survey Nos. 626, 474, 651, 629, 630, 632, 633, 689, 646, 647, and 490,** extending until it reaches the **southwestern corner of Madapur, Nanyapur, and the hill areas,** marking the limit of Harapanahalli Town Municipality.

**North:** Starting from the **Northeastern corner,** the boundary extends through **Survey No. 58,** following the **northwestern border** through **Survey Nos. 52, 51, 50, 48, 31, 30, 25, 24, 23, 22, and 21.** It then crosses the **Harapanahalli-Hospet road at Survey No. 17** and enters **Survey No. 15,** finally reaching the **northwestern corner at Survey No.** All these survey numbers belong to **Harapanahalli village,** extending through **Kayak, Shrungaratota, and Bagali villages,** reaching **Inam lands.** This forms the **northern boundary** of Harapanahalli Town Municipality.

**South:** Starting from the **southwestern corner of Survey No. 440,** the boundary extends towards the **southeastern corner,** passing through **Survey Nos. 648 and 489.** After crossing a **small stream,** it enters **Survey No. 642** and continues through **Survey Nos. 643, 644, 450, 449, 447, 446, 445, 441, and 440.** After crossing another stream at **Survey No. 437**, it enters **Survey No. 436**, then crosses the **Harapanahalli-Kyarakatti road at Survey No. 437.** From there, the boundary follows a **cart track northward**, passing through **Survey Nos. 410, 388, 397, 395, and 394**, crossing the **Manjurayana Katte at Survey No. 393.** It continues through **Survey Nos. 392 and 391,** crosses another **cart track**, and then **Devara Timlapura road at Survey No. 300.** Further, it enters **Survey Nos. 352 and 351,** then **Survey No. 439**, continuing through **Survey Nos. 340, 339, 337, 336, 334, 333, 385, and 384**, following the **eastern boundary**. It extends further through **Survey Nos. 283, 282, and 262**, crossing the **Harapanahalli-Adavihalli road**, finally reaching the **southeastern corner at Survey No.260**.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH